ಶ್ರಮ ಪಡದವರೆಂದರೆ ಗರ್ಭಿಣಿಯರು. ತಮ್ಮೊಂದು ನೋಟದಲ್ಲೇ ಕೂತವರಲ್ಲಿ ಪಾಪಪ್ರಜ್ಞೆ ಹುಟ್ಟಿಸಬಲ್ಲರು ಅವರು. ಆದರೂ ಸಾರ್ವಜನಿಕ ಸಹಾನುಭೂತಿ ಬಯಸದ ಛಲ ಕೆಲವರಿಗೆ. ನಾನು ದೆಹಲಿಯ ಮೆಟ್ರೊದಲ್ಲಿ ಕಂಡದ್ದಿದು. ಶಾಪಿಂಗ್ ಮುಗಿಸಿ ಕ್ಯಾರಿಬ್ಯಾಗನ್ನು ಮಕ್ಕಳಂತೆ ಎದೆಗವುಚಿಕೊಂಡು ಒಬ್ಬ ಯುವತಿ ಹತ್ತಿದಳು. ಸೀಟಿರಲಿಲ್ಲ. ಸಿಖ್ ಮಹಿಳೆಯರೊಬ್ಬರು ಆಕೆಗೆ 'ಬ್ಯಾಗ್ ದೇನಾ' ಎಂದರೆ, ಆಕೆ 'ಥ್ಯಾಂಕ್ಸ್. ಮೈ ಸಂಭಾಲೂಂಗಿ' ಎಂದು ಮುಖಮುರಿಯೆ ಜವಾಬಿತ್ತಳು. ಊರ ಉಸಾಬರಿ ನಿನಗೇಕೆ ಎಂಬಂತೆ ಮಗಳು ತಾಯತ್ತ ಬಿರಿಗಣ್ಣು ಬೀರಿದಳು. ತಾಯಿ ಸುಮ್ಮನಾಗಲಿಲ್ಲ. ಪಕ್ಕದ ಸೀಟು ಖಾಲಿಯಾದೊಡನೆ ಗಬಕ್ಕನೆ ಹಿಡಿದು 'ಆನಾ ಬೈಟ್' ಎಂದು ತರುಣಿಯ ಕೈಹಿಡಿದೆದಳು. ಬಿರುಸುತ್ತರ ಕೊಟ್ಟಿದ್ದಕ್ಕೆ ಮರುಗುತ್ತಿದ್ದ ಆಕೆ ಸುಮ್ಮನೆ ಬಂದು ಕೂತಳು. ಎಳೇ ಗರ್ಭಿಣಿ. ತಾಯ ಮುಖದಲ್ಲೀಗ ನಿರಾಳತೆ. ಸುಪ್ತಗರ್ಭದಲ್ಲಿರುವ ಜೀವವನ್ನು ವ್ಯಕ್ತಲೋಕಕ್ಕೆ ಬರಮಾಡಿಕೊಳ್ಳಲು ಎಷ್ಟು ಕಾಳಜಿ? ಈ ಜೀವಕರುಣೆ ಅಲ್ಲವೇ ಲೋಕವನ್ನು ಪೊರೆಯುತ್ತಿರುವುದು?

ನನ್ನ ಪ್ರಕಾರ, ಪಯಣವನ್ನು ವರ್ಣರಂಜಿತ ಮಾಡುವುದರಲ್ಲಿ ಮಕ್ಕಳಿಗೆ ಪ್ರಥಮ ಸ್ಥಾನ. ಕೆಲವು ಮಕ್ಕಳು ಅಳುವ ಕಾರ್ಯಕ್ರಮ ಶುರುಹಚ್ಚಿದರೆ ನಿಲ್ಲಿಸುವ ಹೆಸರೇ ಎತ್ತುವುದಿಲ್ಲ. ಒಮ್ಮೆ ತಾಯೊಬ್ಬಳು ಕೂಸನ್ನು ಸಂತೈಸಲಾಗದೆ ತಾನೂ ಅಳತೊಡಗಿದಳು. ಬೋಗಿಯ ಜನ ಜುಮ್ಮನೆ ಮುತ್ತಿಕೊಂಡರು. ಒಬ್ಬಹೋಗಿ ಟ್ರೈನಿನಲ್ಲಿ ಡಾಕ್ಟರಿದ್ದಾರೆಯೇ ವಿಚಾರಿಸಿ ಬಂದ. 'ಅಂಗಿ ತಗೀರಿ, ಬಿಗಿ ಆಗಿರಬೇಕು', 'ಗಾಳಿಹಾಕ್ರೀ, ಹೊಟ್ಟೆ ನೋತಿರಬೇಕು', 'ಮಲಿ ಕುಡಿಸರಿ, ಕೂಸು ಹಸ್ಕಿರಬೇಕು', 'ಎತ್ಗೊಂಡು ಗಾಳಿಗೆ ನಿಲ್ರಿ' ನೂರಾರು ಸಲಹೆಗಳು. ಏನು ಮಾಡಿದರೂ ಅಳು ನಿಲ್ಲಲಿಲ್ಲ; ಜನ ಗೊಣಗಲಿಲ್ಲ. ಕೂಸು ಯಾವಾಗ ಮಲಗಿತೊ ಏನೊ? ಹೊತಾರೆ ಕೇಕೆ ಹಾಕುತ್ತಿತ್ತು. ಎಲ್ಲರೂ ಬಂದು ಕೆನ್ನೆತಿವಿದು 'ರಾತ್ರೆ ಏನಾಗಿತ್ತು ನಿನಗೆ' ಎಂದು ಲಟಿಕೆ ಮುರಿಯುವವರೇ. ಅದೀಗ ಸಮಸ್ತರ ಕೈಯಲ್ಲಾಡುವ ಬೊಂಬೆ.

ದೊಡ್ಡಮಕ್ಕಳ ಅಳುವಿಗೆ ಕಾರಣ ಹೀಗೆ ನಿಗೂಢವಾಗೇನೂ ಇರುವುದಿಲ್ಲ. ತಿಂಡಿಯವರು ಬಂದಾಗ ಅಳುಮುಂಜಿ ಮಾಡಿಕೊಂಡು ಮೈನುಲಿಯುವ ಮೂಲಕ ಅದು ಉದ್ಘಾಟನೆಯಾಗುತ್ತದೆ. ಮುಂದಿನ ಹಂತ ನೆಲಕ್ಕೆ ಬಿದ್ದು ಸರ್ಪನೃತ್ಯ ಮಾಡುವುದು. ಮಾರುಗರಾದರೂ ಕಿಡಿಗೇಡಿಗಳು–ಮಕ್ಕಳಿರುವಲ್ಲೇ ನಿಂತು ಬೆಂಕಿಗೆ ತುಪ್ಪಸುರಿವಂತೆ ತಿಂಡಿಗಳ ಹೆಸರನ್ನು ಉಚ್ಚರಿಸುವರು. 'ತಿಂದ್ರ ಹೊಟ್ಟೆ ಕೆಡ್ತದ. ಮನ್ಯಾಗೆ ಉಂಡಿಲ್ಲವೇ? ಊರಾಗೆ ಕೊಡಸ್ತೀನಿ' ಇತ್ಯಾದಿ ಮಂತ್ರದಂಡಗಳು ಕೆಲಸಕ್ಕೆ ಬರುವುದಿಲ್ಲ. ಮಾತೃಸೋಲು ಕಟ್ಟಿಟ್ಟಬುತ್ತಿ. ಬಸ್ಸಿನ ಯಾವ ಮೂಲೆಯಲ್ಲಿ ತಿಂಡಿ ಪ್ಯಾಕೇಟು ಹರಿದರೂ ಮಕ್ಕಳ ಕಿವಿಗೆ ಹೇಗೆ ತಲುಪುತ್ತದೆಯೊ ಕಾಣೆ. ತಾಯ ಗಲ್ಲಮುಟ್ಟಿ ನಮಗೂ ಕೊಡಿಸು ಎಂಬಂತೆ ಸನ್ನೆಯರ್ಜಿ ಸಲ್ಲಿಸುತ್ತವೆ; ತಿಂಡಿಪ್ಯಾಕೇಟನ್ನೂ ಅದರ ಒಡೆಯರ ಮುಖವನ್ನೂ 'ನಿನಗೆ ಹಂಚಿ ತಿನ್ನುವ ಯೋಗ್ಯತೆ ಇದೆಯೇ?' ಎಂಬರ್ಥದಲ್ಲಿ ನೋಡುತ್ತವೆ. ಜನರಾದರೂ ಬಾಲ್ಯದಲ್ಲಿ ಬೇಡಿ ತಿಂದ ಋಣವನ್ನು ಪಾವತಿ ಮಾಡುವಂತೆ, ಮಕ್ಕಳಿಗೆ ಮೀಸಲರ್ಪಿಸುವರು. ಆಗ ತಾಯಂದಿರ ಮುಖದ ಮೇಲೆ 'ನನ್ನ ಕಂದ ಮರುಭೂಮಿಯಲ್ಲೂ ರೊಟ್ಟಿ ಸಂಪಾದಿಸುತ್ತದೆ' ಎಂಬ ಹೆಮ್ಮೆ ಪ್ರಜ್ವಲಿಸುವುದು. ಕೆಲವು ಮಾತೃದೇವತೆಗಳು 'ಕೊಡಬ್ಯಾಡ್ರಿ. ಹೊರಗಿನ ತಿಂಡಿ ಅವಳಿಗಾಗಲ್ಲ. (ಮಗುವನ್ನುದ್ದೇಶಿಸಿ) ಎಷ್ಟು ಸಲಾನೇ ನಿನಗೆ ಹೇಳದು, ಅವರಿವರ ಕೊಟ್ಟಿದ್ದನ್ನು ತಿನ್ನಬ್ಯಾಡಂತ' ಎಂದು ಚಾಟಿಬೀಸುವರು. ಅದು ತಿಂಡಿದಾತನಿಗೆ ಮಾಡಲಾದ ಮಂಗಳಾರತಿ. ಒಮ್ಮೆ ಎಂಟುವರ್ಷ ಬಾಲೆಯೊಂದು ಅಳುಮೊಗದಲ್ಲಿ